ಅವನು ಹೇಳಿದ:

'ನಾನು ಹೋಗುತ್ತೇನೆ.'

ಅವಳು ಕೇಳಿದಳು:

'ಏನು, ನನ್ನನ್ನು ಪ್ರೀತಿಸುವುದಿಲ್ಲವೇ!'

ಅವನು ಏನೂ ಹೇಳದೆ ಬಾಕಿ ಉಳಿದಿದ್ದ ನೋಟುಗಳನ್ನು ತೆಗೆದು ಅವಳಿಗೆ ಕೊಟ್ಟು ಹೊರಗಿಳಿದ. ಸಿಕ್ಕಿದ್ದನ್ನು ಎಳೆದು ಬಾಚಿ ಮೈಗೆ ಸುತ್ತಿಕೊಂಡು ಅವಳೂ ಹೊರಗಿಳಿದಳು. ಮಳೆಯಲ್ಲಿ ನೆನೆಯುತ್ತಾ ಅವಳೂ ರಸ್ತೆಯ ತನಕ ಬಂದಳು. ಹಿಂತಿರುಗಿ ನೋಡದೆ ನೆನೆಯುತ್ತಾ ಅವನೂ ನಡೆದ. ಸ್ವಲ್ಪ ಅತ್ತ. ವಿಚಿತ್ರವಾದ ಬದುಕು... ಅವಳು... ಅಮ್ಮ... ಅಪ್ಪ... ಹೆಣಕ್ಕೆ ಸಮಾನವಾದ ಮಕ್ಕಳು... ಆ ವಾಸನೆ... ಹಾಗೆ ನಡೆಯುತ್ತ ಅವನು ಯೋಚಿಸಿದ. ಯಾಕೆ ಹೀಗಾಗುತ್ತಿದೆ? ಇದಕ್ಕೇ ಏನು ಹೃದಯವನ್ನೇ ಕಿತ್ತು ತಿನ್ನುವಂತೆ ಅವಳು ನನ್ನನ್ನು ನೋಡಿದ್ದು?

ಮಂಗಳಂ

ಶುಭಂ

## ವೈಕಂ ಮುಹಮ್ಮದ್ ಬಷೀರ್

ಕೇರಳದ ವೈಕಂ ಸಮೀಪದ ತಲಯೋಲಪ್ಪರಂಬಿನಲ್ಲಿ ಜನಿಸಿದ ವೈಕಂ ಮುಹಮ್ಮದ್ ಬಷೀರ್ (21.01.1908 – 05.07.1994) ವಿದ್ಯಾಭ್ಯಾಸಕ್ಕೆ ತಿಲಾಂಜಲಿಯಿತ್ತು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸುವುದರ ಮೂಲಕ ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು. ಭಾರತದ ಉದ್ದಗಲಕ್ಕೂ ಸಂಚರಿಸಿ ಎಲ್ಲಾ ಜಾತಿ ವರ್ಗಗಳ ಜನರೊಡನೆ ಬೆರೆತು ಅಗಾಧ ಅನುಭವಗಳನ್ನು ಪಡೆದರು. ಈ ಅನುಭವಗಳನ್ನು ಅಕ್ಷರ ರೂಪಕ್ಕಿಳಿಸಿದ ಬಷೀರ್ ಮಲಯಾಳಂನಲ್ಲಿ ವಿನೂತನ ಮಾದರಿಯ ಕಥನ ಸಂಪ್ರದಾಯಕ್ಕೆ ನಾಂದಿಹಾಡಿದರು. ಸಮಾಜದ ಅನ್ಯಾಯ, ಅವ್ಯವಸ್ಥೆಗಳನ್ನು ವೈನೋದಿಕವಾಗಿ, ಹೃದಯಸ್ಪರ್ಶಿಯಾಗಿ ಮಾನವೀಯ ನೆಲೆಯಿಂದ ಮಂಡಿಸಿದ್ದಾರೆ. ವಿದೇಶಗಳ ಅನೇಕ ಭಾಷೆಗಳಿಗೆ ಬಷೀರ್ ಕೃತಿಗಳು ಅನುವಾದಗೊಂಡಿವೆ. 'ನನ್ನಜ್ಜನಿಗೊದಾನೆಯಿತ್ತು', 'ಪಾತುಮ್ಮನ ಆಡು', 'ಬಾಲ್ಯಕಾಲಸಖಿ' ಮೊದಲಾದ ಅನೇಕ ಕತೆ ಕಾದಂಬರಿಗಳ ಮೂಲಕ ಕನ್ನಡದಲ್ಲಿಯೂ ಪರಿಚಿತರು.

## ಮೋಹನ ಕುಂಟಾರ್

ಕೇರಳದ ಕಾಸರಗೋಡಿನ ಕುಂಟಾರಿನವರಾದ ಮೋಹನ ಕುಂಟಾರ್ ಕ್ಯಾಲಿಕಟ್ ವಿಶ್ವವಿದ್ಯಾಲಯ, ಮದುರೈ ಕಾಮರಾಜ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆದು ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಸಂಶೋಧನೆ, ಅನುವಾದ ಕ್ಷೇತ್ರಗಳಲ್ಲಿ ಗಮನಾರ್ಹ ಕೆಲಸ ಮಾಡಿರುವ ಇವರ 40ಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ. ಇಂಗ್ಲಿಷಿನಿಂದ 'ವಿಯೆಟ್ನಾಮ್ ಆನೆಯನ್ನು ಮಣಿಸಿದ ಮಿಡತೆಗಳು', ಮಲಯಾಳಂನಿಂದ ವೈಕಂ ಮುಹಮ್ಮದರ 'ಬಶೀರ್ ಕಥೆಗಳು', 'ವಾಸುದೇವನ್ ನಾಯರ್ ಕತೆಗಳು', ತಗಳಿ ಶಿವಶಂಕರ ಪಿಳ್ಳೆಯವರ 'ತೋಟಿಯ ಮಗ', ಉರುಬ್ ಅವರ 'ಸುಂದರಿಯರು ಸುಂದರರು', ಪಿ. ವತ್ಸಲಾ ಅವರ 'ಆಗ್ನೇಯ', ಒ. ಚಂದುಮೆನೋನ್ ಅವರ 'ಶಾರದ' ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.